SC No. 119/2022
PW.-51

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್.ಸಿ. 119/2022

| | | |
|---|---|---|
| ಸಾಕ್ಷಿದಾರರ ಹೆಸರು | ಅರುಣ್ ಕುಮಾರ್ | ಪ್ರಮಾಣ ವಚನ ಮಾಡಿದ ದಿನಾಂಕ: **08.09.2025** |
| ತಂದೆಯ/ಗಂಡನ ಹೆಸರು | ಸೋಮಶೇಖರ್ | |
| ವಯಸ್ಸು | 29 ವರ್ಷ | |
| ವೃತ್ತಿ | ಫೋಟೋಗ್ರಾಫರ್ | ಪ್ರಾ.ಸಾಃ 51 |
| ವಾಸ ಸ್ಥಳ | ಶ್ರೀರಾಂಪುರ ಮೈಸೂರು | ಚಾ.ಸಾಃ 25 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಕಳೆದ 11 ವರ್ಷದಿಂದ ಫೋಟೋಗ್ರಾಫರ್ ಆಗಿ ಕೆಲಸ ಮಾಡಿಕೊಂಡಿರುತ್ತೇನೆ. ನನ್ನ ತಾಯಿಯ ಹೆಸರು ನಾಗರತ್ನ. ನನ್ನ ತಂದೆತಾಯಿಗೆ ನಾವು ಇಬ್ಬರು ಮಕ್ಕಳು ಅವರುಗಳೆಂದರೆ ನಾನು ಮತ್ತು ನನ್ನ ಅಣ್ಣ ಅಭಿಶೇಕ್ @ ನಂಜಪ್ಪ. ದಾಖಲೆಗಳಲ್ಲಿ ನನ್ನ ಅಣ್ಣನ ಹೆಸರು ನಂಜಪ್ಪ ಎಂದು ಇರುತ್ತದೆ. ನನ್ನ ತಾಯಿಯ ತಂದೆಗೆ ಒಟ್ಟು 4 ಜನ ಮಕ್ಕಳು. ಅವರುಗಳೆಂದರೆ ಮಂಜುಳ, ಲತಾ, ನನ್ನ ತಾಯಿ ನಾಗರತ್ನ, ಮತ್ತು ಗುರುಮಲ್ಲಸ್ವಾಮಿ. ಎಲ್ಲರಿಗೂ ಮದುವೆ ಆಗಿರುತ್ತದೆ. ನನ್ನ ದೊಡ್ಡಮ್ಮ ಲತಾ ರಮಾಭಾಯಿ ನಗರದಲ್ಲಿ ವಾಸವಾಗಿರುತ್ತಾರೆ. ಅವರಿಗೆ 3 ಜನ ಮಕ್ಕಳು ಅವರುಗಳೆಂದರೆ ರಶ್ಮಿ, ನಿಮಿಶಾಂಭ ಮತ್ತು ನಾಗರ್ಜುನ್. ನನಗೆ ನ್ಯಾಯಾಲಯದ ಮುಂದೆ ಹಾಜರಿರುವ

ಆರೋಪಿ ಮೊದಲು ಗೊತ್ತಿರಲಿಲ್ಲ. ಮಹಜರ್ ಮಾಡುವ ಕಾಲಕ್ಕೆ ನೋಡಿದ್ದೆ.

ದಿನಾಂಕ 21.10.2022 ರಂದು ನನ್ನ ಮಾವ ಸಂಜೆ 6.30 ಮೇಲೆ ನನಗೆ ಫೋನ್ ಮಾಡಿ ದೊಡ್ಡಮ್ಮ ಲತಾ ರವರ ಮನೆಲಯ ಹತ್ತಿರ ಗಲಾಟೆ ಆಗುತ್ತಿರುತ್ತದೆ ಮತ್ತೆ ನನ್ನನ್ನು ಅಲ್ಲಿಗೆ ಹೋಗು ಎಂದು ತಿಳಿಸಿದ್ದರು ಮತ್ತು ನಾನು ಅಲ್ಲಿಗೆ ಹೋಗುಬೇಕು ಎಂದು ಹೊರಡುವಾಗ ಜಯಶಂಕರ್ ನನಗೆ ಫೋನ್ ಮಾಡಿ ನನ್ನ ದೊಡ್ಡಮ್ಮ ಲತಾ ರವರ ಮಗ ನಾಗರ್ಜುನರವರಿಗೆ ತುಂಬಾ ಪೆಟ್ಟಾಗಿರುತ್ತದೆ. ಜೆ.ಎಸ್.ಎಸ್. ಆಸ್ಪತ್ರೆಯ ಹತ್ತಿರ ಬರುವಂತೆ ನನಗೆ ಹೇಳಿದ್ದರು ನಾನು ಆಸ್ಪತ್ರೆಗೆ ಹೋದ ಮೇಲೆ ನೀನು ಇಲ್ಲಿಯೇ ಇರು ಎಂದು ಹೇಳಿ ಜಯಶಂಕರ್ ಅಲ್ಲಿಂದ ಹೊರಟು ಹೋಗಿದ್ದರು. ನಾನು ಆಸ್ಪತ್ರೆಯಲ್ಲಿ ನಾಗರ್ಜುನ ಜೊತೆಯಲ್ಲಿ ಇದ್ದೆ. ದಿನಾಂಕ 26.10.2022 ರಂದು ನಾಗರ್ಜುನನ ಬಟ್ಟೆಗಳು ರಕ್ತಮಯವಾಗಿದ್ದವು ಅವುಗಳನ್ನು ಕೊಡಲು ನಾನು ಪೊಲೀಸ್ ಠಾಣೆಗೆ ಹೋಗಿದ್ದೆ. ನಾನು ಆ ರಕ್ತಮಯವಾಗಿದ್ದ ಬಟ್ಟೆಗಳನ್ನು ಕೊಟ್ಟು ಮಹಜರ್ ಗೆ ಸಹಿ ಮಾಡಿದ್ದೆ. ನಾನು, ಸಂತೋಷ ಮತ್ತು ನಾಗರ್ಜುನ 3 ಜನ ಕೂಡಿ ಪೊಲೀಸ್ ಠಾಣೆಗೆ ಹೋಗಿದ್ದೆವು. ನಾನು ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಅಮಾನತ್ತು ಪಂಚನಾಮೆಯನ್ನು ತೋರಿಸಲಾಯಿತು. ಸಾಕ್ಷಿದಾರರು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅಮಾನತ್ತು ಪಂಚನಾಮೆ ಈಗಾಗಲೇ ನಿಪಿ-12 ಎಂದು ಗುರುತಿಸಿಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ-12(ಡಿ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ತನ್ನ

ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ಪಂಚಾಯಿತಿದಾರರಿಗೆ ನೀಡಿದ ನೋಟೀಸ್ ಇದ್ದು ಅದನ್ನು ಈಗಾಗಲೇ ನಿಪಿ–13 ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ–13 (ಬಿ) ಎಂದು ಗುರುತಿಸಲಾಯಿತು. ನಾನು ರಕ್ತಮಯವಾದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ರಕ್ತಮಯವಾದ ಬಟ್ಟೆಗಳನ್ನು ತೋರಿಸಲಾಯಿತು. ಸಾಕ್ಷಿದಾರರು ರಕ್ತಮಯವಾದ ಬಟ್ಟೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಒ–12 ರಿಂದ 14 ಎಂದು ಗುರುತಿಸಲ್ಪಟ್ಟಿರುತ್ತವೆ.

ನಾನು ಜೆ.ಎಸ್.ಎಸ್. ಆಸ್ಪತ್ರೆಗೆ ಹೋದಾಗ ಆಸ್ಪತ್ರೆಯಲ್ಲಿ ನಾಗರ್ಜುನ ಇದ್ದ ನಾಗರ್ಜುನನಿಗೆ ಕಿವಿ ಹತ್ತಿರ ಮತ್ತು ಎಡ ಹಸ್ತದ ಮೇಲೆ ಗಾಯಗಳು ಆಗಿದ್ದವು. ಶಿವಪ್ರಕಾಶ್ ರವರು ಲತಾ ಅವರ ಮನೆಗೆ ಬರುತ್ತಿದ್ದರು. ಆ ವಿಷಯಕ್ಕೆ ಶಿವಪ್ರಕಾಶ್ ರವರ ಮಗ ಸಾಗರ್ ಎಂಬುವರು ಶಿವಪ್ರಕಾಶ್ ಮತ್ತು ಲತಾ ರವರಿಗೆ ಮಚ್ಚಿನಿಂದ ಹಲ್ಲೆ ಮಾಡಿರುತ್ತಾರೆ ಎಂದು ನಾಗರ್ಜುನ್ ನನಗೆ ಹೇಳಿದ್ದರು. ಸಾಗರ್ ರವರು ಶಿವಪ್ರಕಾಶ್ ಮತ್ತು ಲತಾ ರವರಿಗೆ ಮಚ್ಚಿನಿಂದ ಹಲ್ಲೆ ಮಾಡಲು ಹೋದಾಗ ನಾಗರ್ಜುನ್ ಮಧ್ಯೆ ಹೋಗಿದ್ದರಿಂದ ಸಾಗರ್ ನಾಗರ್ಜುನ್ ರವರಿಗೆ ಮಚ್ಚಿನಿಂದ ಹಲ್ಲೆ ಮಾಡಿದ್ದ ಎಂದು ಗೊತ್ತಾಯಿತು.

ದಿನಾಂಕ 22.10.2022 ರಂದು ಲತಾ ರವರ ಮನೆಯ ಹತ್ತಿರ ಹೋಗಿದ್ದು ಸಾಗರ್ ಎಂಬುವರು ಲತಾ ಮತ್ತು ಶಿವಪ್ರಕಾಶ್ ಎಂಬುವರಿಗೆ ಮಚ್ಚಿನಿಂದ ಹಲ್ಲೆ ಮಾಡಿ

ಶಿವಪ್ರಕಾಶ್ ಮತ್ತು ಲತಾ ರವರನ್ನು ಕೊಲೆ ಮಾಡಿರುತ್ತಾರೆ ಎಂದು ಗೊತ್ತಾಯಿತು. ಪೊಲೀಸರವರಿಗೆ ಈ ದಿನ ಏನು ಹೇಳಿರುತ್ತೇನೆಯೋ ಅದೇ ವಿಚಾರವನ್ನು ಹೇಳಿದ್ದೆ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಘಟನೆಯ ದಿನಾಂಕ 21.10.2021 ರಂದು ಆಗಿತ್ತು ಎಂದರೆ ಸರಿ. ರಾತ್ರಿ 10.45 ಗಂಟೆ ಸುಮಾರಿಗೆ ನನ್ನ ಮಾವ ಗುರುಮಲ್ಲ ಸ್ವಾಮಿ ನನ್ನ ಮೊಬೈಲ್ ಗೆ ಕರೆ ಮಾಡಿದ್ದರು ಎಂದರೆ ಸರಿ. ನಾನು ಪೊಲೀಸರಿಗೆ ಬಟ್ಟೆಗಳನ್ನು ದಿನಾಂಕ 26.10.2021 ರಂದು ಕೊಟ್ಟಿದ್ದೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ :**

ನಾನು ಫೋಟೋಗ್ರಾಫರ್ ಇರುತ್ತೇನೆ. ನಾನು ಮದುವೆ ಮತ್ತು ಇತರೆ ಸಮಾರಂಭಗಳಲ್ಲಿ ಫೋಟೋಗಳನ್ನು ತೆಗೆಯುತ್ತೇನೆ. ನನಗೆ ಹಗಲು ಮತ್ತು ರಾತ್ರಿಯ ವ್ಯತ್ಯಾಸ ಗೊತ್ತಿರುತ್ತದೆ. ನಾನು ಜೆ.ಎಸ್.ಎಸ್. ಆಸ್ಪತ್ರೆಯ ಹತ್ತಿರ ಹೋದಾಗ ನಾಗರ್ಜುನ ಮತ್ತು ಜಯಶಂಕರ ಆ ಆಸ್ಪತ್ರೆಗೆ ಹೋಗಿ ಎಷ್ಟು ಸಮಯ ಆಗಿತ್ತು ಎಂದು ನನಗೆ ಮಾಹಿತಿ ಇಲ್ಲ. ನನ್ನ ಭಾವ ಜಯಶಂಕರ ನನಗೆ ಫೋನ್ ಮಾಡಿದಾಗ ವಿದ್ಯಾರಣ್ಯಪುರಂನಲ್ಲಿ ಇದ್ದಂತಹ ಬಾಡಿಗೆ ಮನೆಯಲ್ಲಿ ಇದ್ದೆ. ಆ ಮನೆಯಿಂದ ಜೆ.ಎಸ್.ಎಸ್. ಆಸ್ಪತ್ರೆಗೆ ಸುಮಾರು ಒಂದೂವರೆ ಕಿಲೋಮೀಟರ್ ಅಂತರ ಇರುತ್ತದೆ. ನಾನು ಆಸ್ಪತ್ರೆಗೆ ಹೋದಾಗ

ನಾಗರ್ಜುನನಿಗೆ ವೈದ್ಯರು ಚಿಕಿತ್ಸೆ ಕೊಡುತ್ತಿರಲಿಲ್ಲ ಆದರೆ ಅಡ್ಮಿಟ್ ಮಾಡಿಕೊಂಡಿದ್ದರು. ನಾಗರ್ಜುನನ್ನು ದಿನಾಂಕ 22.10.2021 ರಂದು ಬಿಡುಗಡೆ ಮಾಡಿದ್ದರು. ಆದರೆ ಯಾವ ವೇಳೆಯಲ್ಲಿ ಆತನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿದರು ಎಂದು ಈಗ ನನಗೆ ಮಾಹಿತಿ ಇರುವುದಿಲ್ಲ. ನಾಗರ್ಜುನನ ಬಟ್ಟೆಗಳನ್ನು ಆಸ್ಪತ್ರೆಯ ಸಿಬ್ಬಂದಿಯವರು ನನಗೆ ಕೊಟ್ಟಿದ್ದರು. ದಿನಾಂಕ 21.10.2021 ರಂದು ಬಟ್ಟೆಗಳನ್ನು ನನ್ನ ಸುಪರ್ದಿಗೆ ಕೊಟ್ಟಿದ್ದರು. ಆಸ್ಪತ್ರೆಯಿಂದ ಬಿಡುಗಡೆ ಆಗುವ ಪೂರ್ವದಲ್ಲಿ ನನಗೆ ಕೊಟ್ಟಿದ್ದರು. ನಾಗರ್ಜುನ ಆಸ್ಪತ್ರೆಯಿಂದ ಬಿಡುಗಡೆ ಆಗುವ ಪೂರ್ವದಲ್ಲಿ ಪೊಲೀಸರು ಆಸ್ಪತ್ರೆಗೆ ಬಂದಿದ್ದರು. ಆಸ್ಪತ್ರೆಯಲ್ಲಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದರು. ಘಟನೆ ಬಗ್ಗೆ ಕೇಳಿದ್ದರು. ನನಗೆ ಆ ವೇಳೆಯಲ್ಲಿ ಅಷ್ಟಾಗಿ ಮಾಹಿತಿ ಇರಲಿಲ್ಲ. ಪೊಲೀಸರು ನನ್ನನ್ನು ದಿನಾಂಕ 21.10.2021 ರಂದು ವಿಚಾರಣೆ ಮಾಡಿದ್ದರು. ಪೊಲೀಸರು ದಿನಾಂಕ 21.10.2021 ರ ರಾತ್ರಿ 11.00–11.30 ಗಂಟೆ ಸುಮಾರಿಗೆ ನನ್ನನ್ನು ವಿಚಾರಣೆ ಮಾಡಿದರು. ಆದಾದ ನಂತರ ನಾಗರ್ಜುನ ಆಸ್ಪತ್ರೆಯಿಂದ ಬಿಡುಗಡೆ ಆಗುವ ಪೂರ್ವದಲ್ಲಿ ನನ್ನನ್ನು ವಿಚಾರಣೆ ಮಾಡಿರಲಿಲ್ಲ. ದಿನಾಂಕ 22.10.2021 ರಂದು ನಾಗರ್ಜುನನ ಬಟ್ಟೆಗಳನ್ನು ನನ್ನ ಸುಪರ್ದಿಗೆ ತೆಗೆದುಕೊಂಡ ಮೇಲೆ ನಾನು ಆ ಬಟ್ಟೆಗಳನ್ನು ಮನೆಯಲ್ಲಿ ಇಟ್ಟಿದ್ದೆ. ದಿನಾಂಕ 26.10.2021 ರಂದು ಪೊಲೀಸರಿಗೆ ಕೊಟ್ಟಿದ್ದೆ ಅಲ್ಲಿವರೆಗೆ ಆ ಬಟ್ಟೆಗಳು ಮನೆಯಲ್ಲಿ ಇದ್ದವು. ದಿನಾಂಕ 22.10.2021 ರಿಂದ ದಿನಾಂಕ 26.10.2021 ರ ಮಧ್ಯೆ ಪೊಲೀಸರು ನನಗೆ ಸಿಕ್ಕಿದ್ದರು. ನಾನು ಪೊಲೀಸರಿಗೆ

ನಾಗರ್ಜುನ ನ ಬಟ್ಟೆಗಳು ಮನೆಯಲ್ಲಿ ಇರುವ ಬಗ್ಗೆ ದಿನಾಂಕ 26.10.2021 ರ ಪೂರ್ವದಲ್ಲಿ ತಿಳಿಸಿರಲಿಲ್ಲ. ಆಸ್ಪತ್ರೆಯ ಸಿಬ್ಬಂದಿಯವರು ನಾಗರ್ಜುನನ ಬಟ್ಟೆಗಳನ್ನು ನನ್ನ ಸುಪರ್ದಿಗೆ ಕೊಟ್ಟ ಬಗ್ಗೆ ನನ್ನ ಸಹಿ ತೆಗೆದುಕೊಂಡ ಬಗ್ಗೆ ನನಗೆ ಈಗ ನೆನಪಿಗೆ ಬರುತ್ತಿಲ್ಲ. ನಾನು ಜೆ.ಎಸ್.ಎಸ್. ಆಸ್ಪತ್ರೆಗೆ ಹೋಗಿದ್ದೆ ನನ್ನ ಭಾವ ಜಯಶಂಕರ್ ರವರು ನನಗೆ ಆಸ್ಪತ್ರೆಯಲ್ಲಿ ಇರುವಂತೆ ತಿಳಿಸಿದ್ದರು ಮತ್ತು ನಾಗರ್ಜುನನಿಗೆ ಗಾಯಗಳು ಆಗಿದ್ದ ಬಗ್ಗೆ ತಿಳಿಸಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 22.10.2021 ರಂದು ನಾಗರ್ಜುನ ನ ರಕ್ತಮಯವಾದ ಬಟ್ಟೆಗಳನ್ನು ಆಸ್ಪತ್ರೆಯ ಸಿಬ್ಬಂದಿಯವರು ನನಗೆ ಕೊಟ್ಟಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಆಸ್ಪತ್ರೆಯವರು ನಾಗರ್ಜುನನ ರಕ್ತಮಯವಾದ ಬಟ್ಟೆಗಳನ್ನು ದಿನಾಂಕ 22.10.2021 ರಂದು ಕೊಟ್ಟಿದ್ದರು ಎನ್ನುವ ವಿಚಾರವನ್ನು ಹೇಳಿದ್ದೆ. ನಾನು ಪೊಲೀಸರಿಗೆ ಆಸ್ಪತ್ರೆಯ ಸಿಬ್ಬಂದಿಯವರು ಕೊಟ್ಟಿದ್ದರು ಎಂದು ಹೇಳುವ ನಾಗರ್ಜುನನ ರಕ್ತಮಯವಾದ ಬಟ್ಟೆಗಳ ಬಗ್ಗೆ ತಿಳಿಸದೇ ಇದ್ದರು ಸಹ ತಿಳಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನಾಗರ್ಜುನನ ಬಟ್ಟೆಗಳ ಬಗ್ಗೆ ಲಿಖಿತ ನೊಟೀಸ್ ಕೊಟ್ಟಿರಲಿಲ್ಲ ಆದರೆ ಮೌಖಿಕವಾಗಿ ಹೇಳಿದ್ದರು. ಮಹಜರ್ ಗೆ ಹೋದಾಗ ಮಧ್ಯಾಹ್ನ 11.30 ಮೇಲ್ಪಟ್ಟು ಸಹಿ ಮಾಡಿದ್ದೆ ಪೊಲೀಸರು ಅಲ್ಲಿ 1 ಗಂಟೆಯ ವರೆಗೆ ಇದ್ದರು. ಪೊಲೀಸರು ಮಹಜರ್ ಮಾಡಿದ್ದರು ನಾನು ರಕ್ತಮಯವಾದಂತಹ

ಬಟ್ಟೆಗಳನ್ನು ಕೊಟ್ಟಿದ್ದೆ ಮತ್ತು ಅಲ್ಲಿ ಸಹಿ ತೆಗೆದುಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಹಿ ಮಾಡಿದ್ದೆ ಎಂದು ಹೇಳುವ ದಾಖಲೆಯಲ್ಲಿ ನಾನು ಸಹಿ ಮಾಡುವ ಕಾಲಕ್ಕೆ ಏನನ್ನು ಬರೆದಿರಲಿಲ್ಲ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸ ಇ ಎ ಒ

4 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.